
ಚಿತ್ರ: ೭೩

ಏಕೆಂದರೆ ನಾನು ಭಗವಂತನ ಪಾದಪದ್ಮಗಳನ್ನು ಸ್ಪರ್ಶಿಸಿದ್ದೇನೆ."

**ಛಾಯಾಚಿತ್ರ ೭೪**

ಈ ಚಿತ್ರ ಕೂಡ ಕಾಶ್ಮೀರದಲ್ಲಿಯೇ ತೆಗೆದದ್ದು. ಕಾಶ್ಮೀರದಲ್ಲಿ ಸ್ವಾಮೀಜಿಯವರು ಬಹಳ ಉನ್ನತ ಭಾವದಲ್ಲಿ ಇದ್ದರು. ಅವರ ಭಾವದ ಗಾಢತೆಯನ್ನು ಕುರಿತು ಸೋದರಿ ನಿವೇದಿತಾ ತಮ್ಮ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ: " 'ಎಂದಿಗೂ ನಮ್ಮ ಧ್ಯೇಯವನ್ನು ಮರೆಯದೆ ಇರೋಣ' ಎಂದು ಸ್ವಾಮೀಜಿ ಹೇಳುತ್ತಿದ್ದರು. ಆ ಸಂದರ್ಭಗಳಲ್ಲಿ ತಾವು ಪ್ರದರ್ಶಿಸಬೇಕೆಂದಿದ್ದ ಆಲೋಚನೆಗಳ ಜೊತೆಗೆ ಅವರು ಸಂಪೂರ್ಣವಾಗಿ ತನ್ಮಯ


ಚಿತ್ರ: ೭೪

ವಾಗುತ್ತಿದ್ದರು. ಪ್ರಕೃತಿಯ ನಿಯಮಗಳು ಕ್ರೂರ ಮತ್ತು ಅಹಂಕಾರಯುಕ್ತವೆಂದು ನಮಗೆ ಆಗ ಭಾಸವಾಗುತ್ತಿತ್ತು. ಅವರ ವಾಣಿಗಳನ್ನು ಕುಳಿತು ಕೇಳುತ್ತಿದ್ದ ನಮಗೆ ಯಾವುದೋ ಅದೃಶ್ಯವಾದ ನಿರಪೇಕ್ಷ ಸತ್ಯತತ್ತ್ವಕ್ಕೆ ಮುಖಾಮುಖಿಯಾಗಿ ಇರುವಂತೆ ಅನ್ನಿಸುತ್ತಿತ್ತು."

**ಛಾಯಾಚಿತ್ರ ೭೫**

೧೮೯೯ರ ಜೂನ್ ೨೦ರಂದು ಸ್ವಾಮಿ ವಿವೇಕಾನಂದರು ಮತ್ತು ಸ್ವಾಮಿ ತುರೀಯಾನಂದರು ಪಶ್ಚಿಮದೇಶಗಳಿಗೆ ಹೋಗುವುದೆಂದು ನಿಶ್ಚಯವಾಯಿತು. ಜೂನ್ ೧೯ರಂದು ಬೀಳ್ಕೊಡಿಗೆಯ ಸಮಾರಂಭವನ್ನು ಏರ್ಪಡಿಸಲಾಯಿತು. ಅದರಲ್ಲಿ ಸೋದರ ಸಂನ್ಯಾಸಿಗಳು ಇಬ್ಬರಿಗೂ ಶುಭಹಾರೈಸಿದರು.


ಚಿತ್ರ: ೭೫

ಈ ಸಂದರ್ಭದಲ್ಲಿ ತೆಗೆಯಲಾದ ಚಿತ್ರ ಇದು. ಈ ಚಿತ್ರದಲ್ಲಿರುವವರ ಪರಿಚಯ ಹೀಗಿದೆ:

**ನಿಂತವರು (ಎಡದಿಂದ) :** ದೇವೇಂದ್ರನಾಥ ಮಜುಮ್‌ದಾರ್, ಸ್ವಾಮಿ ನಿರ್ಮಲಾನಂದ, ಸ್ವಾಮಿ ವಿರಜಾನಂದ, ಸ್ವಾಮಿ ಶಿವಾನಂದ, ಸ್ವಾಮಿ ತುರೀಯಾನಂದ, ಸ್ವಾಮಿ ಅಖಂಡಾನಂದ, ಸ್ವಾಮಿ ವಿಜ್ಞಾನಾನಂದ, ಸ್ವಾಮಿ ಶಾರದಾನಂದ, ಸ್ವಾಮಿ ಸಚ್ಚಿದಾನಂದ ಮತ್ತಿತರರು.


ಸ್ವಾಮಿ ವಿವೇಕಾನಂದರು ಕುರ್ಚಿಯಲ್ಲಿ ಕುಳಿತಿದ್ದಾರೆ. ಬ್ರಹ್ಮಚಾರಿ ಹರೇಂದ್ರನಾಥ ಅವರ ಪಕ್ಕದಲ್ಲಿ ಮೊಳಕಾಳ ಮೇಲೆ ನಿಂತಿದ್ದಾರೆ.

**ಬೆಂಚು ಅಥವಾ ವರಾಂಡಾದ ಅಂಚಿನಲ್ಲಿ ಕುಳಿತವರು:** ಸ್ವಾಮಿ ಸೊಮಾನಂದ, ಸ್ವಾಮಿ ಕಲ್ಯಾಣಾನಂದ, ಸ್ವಾಮಿ ಅದ್ವೈತಾನಂದ, ಸ್ವಾಮಿ ಆತ್ಮಾನಂದ, ಸ್ವಾಮಿ ತ್ರಿಗುಣಾತೀತಾನಂದ, ಸ್ವಾಮಿ ಸುರೇಶ್ವರಾನಂದ, ಸ್ವಾಮಿ ಬೋಧಾನಂದ, ಬ್ರಹ್ಮಚಾರಿ ನಂದಲಾಲ್, ಖೇಡಾ, ಸ್ವಾಮಿ ಪ್ರಕಾಶಾನಂದ, ಬ್ರೋಜೇನ್, ಸ್ವಾಮಿ ಶುದ್ಧಾನಂದ **ಕೆಳಗೆ :** ಸ್ವಾಮಿ ನಿಶ್ಚಯಾನಂದ ಇಲ್ಲವೇ ಹಾರು ಠಾಕೂರ್ ಎಂಬ ಭಕ್ತರು. ✷


# ನಾರಾಯಣ ತೀರ್ಥ

**ಕಥೆ : ದರ್ಶನ** **ಚಿತ್ರ : ಶಂಕರ್**


**1** ದೇವರಲ್ಲಿ ಭಕ್ತಿಯಿಟ್ಟಿದ್ದ ಒಬ್ಬ ಭಕ್ತ ಮತ್ತು ಆತನ ಪತ್ನಿಗೆ, ಶ್ರೀಕೃಷ್ಣನ ಅನುಗ್ರಹದಿಂದ ಒಂದು ಗಂಡುಮಗು ಹುಟ್ಟಿತು. ಅವನಿಗೆ 'ನಾರಾಯಣ' ಎಂದು ಹೆಸರಿಟ್ಟರು. ಬಾಲ್ಯದಿಂದಲೇ ನಾರಾಯಣನು ದೇವರ ಭಜನೆ ನಡೆಯುವ ಸ್ಥಳಗಳಿಗೆ ಹೋಗುತ್ತಿದ್ದನು. ತನ್ನನ್ನೇ ಮೈಮರೆತು ಭಗವಂತನ ಸಂಕೀರ್ತನೆಯನ್ನು ಕೇಳುತ್ತಿದ್ದನು.





**2** ನಾರಾಯಣನ ತಾಯಿ ಸೂಕ್ತ ವಯಸ್ಸಿನ ಒಬ್ಬ ಕನ್ಯೆಯನ್ನು ಆಯ್ಕೆ ಮಾಡಿದಳು. ಅವಳನ್ನು ತನ್ನ ಮಗನಿಗೆ ಕೊಟ್ಟು ಮದುವೆ ಮಾಡಿದಳು.





**3** ಯುವ ದಂಪತಿಗಳು ಸ್ವಲ್ಪಕಾಲ ಗೃಹಸ್ಥಜೀವನವನ್ನು ನಡೆಸಿದರು.




**2** ಹಲವಾರು ದಿನಗಳು ಕಳೆದುಹೋದವು. ಹೆಂಡತಿ ಹಿಂತಿರುಗಿ ಬರಲೇ ಇಲ್ಲ. ನಾರಾಯಣನಿಗೆ ಕಾತರ. ಅವಳನ್ನು ವಾಪಸ್ಸು ಕರೆತರಲು ಹೊರಟ. ಮಾರ್ಗದಲ್ಲಿ ಒಂದು ನದಿಯನ್ನು ದಾಟಬೇಕಾಗಿತ್ತು. ನದಿ ಪ್ರವಾಹದಲ್ಲಿತ್ತು. ಭಾರಿ ಮಳೆ ಬೇರೆ. ಅವನಿಗೆ ಯಾವ ದೋಣಿಯೂ ಸಿಕ್ಕಲಿಲ್ಲ. ತನ್ನ ಹೆಂಡತಿಯನ್ನು ನೋಡುವ ಕಾತರವನ್ನು ತಾಳಲಾಗದೆ, ನಾರಾಯಣನು ಭೋರ್ಗರೆಯುತ್ತಿರುವ ನದಿಗೆ ಧುಮುಕಿ ಈಜತೊಡಗಿದ.




**5** ನಾರಾಯಣನು ಸಂನ್ಯಾಸಮಂತ್ರಗಳನ್ನು ಉಚ್ಚರಿಸುತ್ತ ಹಾಗೆಯೇ ಪ್ರಜ್ಞೆ ತಪ್ಪಿದನು. ಅವನನ್ನು ಅಲೆಗಳು ದಡದೆಡೆಗೆ ಕರೆದುಕೊಂಡು ಬಂದವು. ಪ್ರಜ್ಞೆ ಬಂದಾಗ ಅವನಿಗೆ ತನ್ನ ಹೆಂಡತಿಯ ನೆನಪಾಯಿತು. ಸಂನ್ಯಾಸವನ್ನು ತೆಗೆದುಕೊಂಡ ಬಗ್ಗೆ ಯಾರಲ್ಲಿಯೂ ಹೇಳುವುದಿಲ್ಲ ಎಂದುಕೊಂಡು, ಹೆಂಡತಿಯ ಮನೆಗೆ ಬಂದನು. ಹೆಂಡತಿ ಅವನನ್ನು ಸ್ವಾಗತಿಸಿದಳು, ಗೌರವವನ್ನು ತೋರಿಸಿದಳು. ಅಂದು ರಾತ್ರಿ ಅವಳು ನಾರಾಯಣನನ್ನು ಭೇಟಿ ಮಾಡಲು ಕೊಠಡಿಗೆ ಬಂದಾಗ...





**6** ಅವಳಿಗೆ ಪ್ರಜ್ಞೆ ಬಂದಮೇಲೆ...





**7** ನಾರಾಯಣನು ಸಂನ್ಯಾಸಿಯಾಗಿ, 'ನಾರಾಯಣ ತೀರ್ಥ' ರಾದರು. ಅವರು ತೀರ್ಥಯಾತ್ರೆಗೆ ಹೊರಟು, ನಡು ಕಾವೇರಿ ಎಂಬ ಗ್ರಾಮಕ್ಕೆ ಬಂದರು. ಅಲ್ಲಿ ಅವರಿಗೆ ವಿಪರೀತ ಹೊಟ್ಟೆನೋವು ಉಂಟಾಯಿತು. ನೋವಿನಿಂದ ನರಳುತ್ತ ಮಲಗಿದ್ದರು. ಆ ನೋವಿನಲ್ಲಿಯೇ ಅವರಿಗೊಂದು ಕನಸು ಬಿತ್ತು.





**8** ಬೆಳಿಗ್ಗೆ ಕಣ್ಣುಬಿಟ್ಟಾಗ ನಾರಾಯಣ ತೀರ್ಥರು ನೋಡಿದ್ದು ಒಂದು ಕಾಡುಹಂದಿಯನ್ನು. ಅವರು ಅದನ್ನೇ ಅನುಸರಿಸಿದರು. ಆ ಕಾಡುಹಂದಿ ಭೂಪತಿರಾಜಪುರದ ವೆಂಕಟಾಚಲಪತಿಯ ದೇವಸ್ಥಾನದ ತನಕ ಹೋಗಿ ಅಲ್ಲಿ ಮಾಯವಾಯಿತು.




**9** ನಾರಾಯಣ ತೀರ್ಥರು ದೇವಸ್ಥಾನದ ಪ್ರಾಂಗಣದಲ್ಲಿ ಕುಳಿತುಕೊಂಡರು. ಭಜನೆ ಮತ್ತು ಧ್ಯಾನಗಳಲ್ಲಿ ಮಗ್ನರಾದರು. ದೇವಸ್ಥಾನಕ್ಕೆ ಬಂದ ಭಕ್ತರು ಒಬ್ಬೊಬ್ಬರಾಗಿ ಅವರನ್ನು ಸೇರಿಕೊಂಡರು.




**10** ಗ್ರಾಮದ ಜನರು, ಕಾಲಕ್ರಮೇಣ, ಅವರಿಗೊಂದು ಗುಡಿಸಲನ್ನು ಕಟ್ಟಿಕೊಟ್ಟರು. ದೇವರ ನೈವೇದ್ಯಕ್ಕೆ ಆಹಾರ ಪದಾರ್ಥಗಳನ್ನು ತಂದುಕೊಟ್ಟರು. ಕೆಲವರು ಅವರ ಶಿಷ್ಯರೂ ಆದರು.




**11** ಅವರೆಲ್ಲ ಸೇರಿ ಭಗವಂತನ ವಿಗ್ರಹವನ್ನು ಅಲಂಕರಿಸಿ, ಒಂದು ಪರದೆಯನ್ನು ಹಾಕಿದರು.




**12** ನಾರಾಯಣ ತೀರ್ಥರು ಭಜನೆಯನ್ನು ಹಾಡಲು ಆರಂಭಿಸಿದರು. ಹಾಡುವಾಗ ಮನಸ್ಸಿನಲ್ಲಿಯೇ ಭಗವಂತನ ಲೀಲೆಗಳನ್ನು ಕಾಣುತ್ತಿದ್ದರು. ಅವರ ಭಜನೆಯನ್ನು ಕೇಳುವುದಕ್ಕೆ ಜನ ಗುಂಪುಗುಂಪಾಗಿ ಬಂದರು.

